ವಿಜಯವಾಣಿ

Online Newspaper Clipping Service

**Dtd-Friday, 03rd, August- 2018**

Page No. 03

# ವಿವಿಗಳ ಯೂನಿರ್‍ಯಾಂಕ್ ಪಟ್ಟಿ ಪ್ರಕಟ

ಬೆಂಗಳೂರು: ವಿಶ್ವವಿದ್ಯಾಲಯಗಳಿಗೆ ರ್‍ಯಾಂಕ್ ನೀಡುವ 'ಯೂನಿರ್‍ಯಾಂಕ್' ಸಂಸ್ಥೆ 2018ನೇ ಸಾಲಿನ ರ್‍ಯಾಂಕ್ ಪಟ್ಟಿ ಬಿಡುಗಡೆ ಮಾಡಿದೆ. ದೆಹಲಿ ವಿವಿ ಮೊದಲ ರ್‍ಯಾಂಕ್ ಪಡೆದಿದ್ದು, ಪಂಜಾಬ್‌ನಲ್ಲಿರುವ ಜಲಂದರ್‌ನ 'ಲವ್ಲಿ ಪ್ರೊಫೆಷನಲ್ ಯೂನಿರ್ವಸಿಟಿ'(ಎಲ್‌ಪಿ ವಿವಿ) ಐದನೇ ರ್‍ಯಾಂಕ್ ಗಳಿಸಿದೆ. 878 ಶಿಕ್ಷಣ ಸಂಸ್ಥೆಗಳನ್ನು ಸಮೀಕ್ಷೆಗೆ ಒಳಪಡಿಸಿ ರ್‍ಯಾಂಕ್ ಬಿಡುಗಡೆ ಮಾಡಲಾಗಿದೆ. ದೆಹಲಿ ವಿವಿ ಪ್ರಥಮ, ಐಐಟಿ ಖಾನ್ ಪುರ, ಮದ್ರಾಸ್, ಬಾಂಬೆ ಕ್ರಮವಾಗಿ 2,3,4ನೇ ರ್‍ಯಾಂಕ್‌ಗಳಿಸಿವೆ. 5ನೇ ರ್‍ಯಾಂಕ್ ಪಡೆದಿದೆ ಎಲ್‌ಪಿ ವಿವಿ 14,12,427 ಫೇಸ್‌ಬುಕ್ ಲೈಕ್ ನಲ್ಲೂ ಮುಂದಿದೆ. ಎಲ್‌ಪಿಯು ಜನಪ್ರಿಯತೆಗಳಿಸಿದೆ.

ವಿಶ್ವವಿದ್ಯಾಲಯಗಳು ನೀಡುವ ವರದಿ ಹೊರತಾಗಿ ಹೆಚ್ಚುವರಿ ಮಾಹಿತಿಯನ್ನು ಕಲೆಹಾಕಿ ರ್‍ಯಾಂಕ್ ಪಟ್ಟಿ ಬಿಡುಗಡೆ ಮಾಡಲಾಗಿದೆ. ಪ್ರತಿ ವರ್ಷ ಜನವರಿ ಮತ್ತು ಜುಲೈನಲ್ಲಿ ರ್‍ಯಾಂಕ್ ಪ್ರಕಟಿಸಲಾಗುತ್ತದೆ. ವಿಶ್ವದಾದ್ಯಂತ 13,600 ವಿಶ್ವವಿದ್ಯಾಲಯಗಳಿವೆ. ಅಮೆರಿಕ, ಯುರೋಪ್, ಏಷ್ಯಾ ದೇಶಗಳ ವಿವಿಗಳನ್ನು ಸಮೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಯೂನಿರ್‍ಯಾಂಕ್‌ನ ಸರ್ಚ್ ಇಂಜಿನ್ ಸಂಪಾದಕರು ತಮ್ಮ ವೆಬ್‌ಸೈಟ್‌ನಲ್ಲಿ ಬರೆದುಕೊಂಡಿದ್ದಾರೆ. ರ್‍ಯಾಂಕಿಂಗ್ ಗೆ ನೋಂದಣಿಯಾಗಲು ವಿವಿ ಅಥವಾ ಶಿಕ್ಷಣ ಸಂಸ್ಥೆಗಳು ಸಂಬಂಧಪಟ್ಟ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆಯವುದು ಕಡ್ಡಾಯ. ಪದವಿ ಮತ್ತು ಸ್ನಾತಕೋತ್ತರ ಪದವಿ ನಡೆಸುತ್ತಿರಬೇಕು ಎಂದು ಹೇಳಿದ್ದಾರೆ.

ವಿಜಯವಾಣಿ



# ಡೀಮ್ಡ್ ವಿವಿಗಳ ಮಾನ್ಯತೆ ನಿಯಮ ಪರಿಷ್ಕರಣೆ ಶೀಘ್ರ

ನವದೆಹಲಿ : ಸ್ವಾಯತ್ತ ವಿಶ್ವವಿದ್ಯಾಲಯದ ಮಾನ್ಯತೆ ಬಯಸುವ ಶಿಕ್ಷಣ ಸಂಸ್ಥೆಗಳಿಗೆ ವಿಧಿಸಲಾಗಿದ್ದ ಅರ್ಹತೆ ಮಾನದಂಡಗಳನ್ನು ಸಡಿಲಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಯುಪಿಎ ಅವಧಿಯಲ್ಲಿ ಸ್ವಾಯತ್ತ ಸಂಸ್ಥೆಗಳಿಗೆ ಹೇರಲಾಗಿದ್ದ ನಿಯಮಗಳನ್ನು 2016ರಲ್ಲಿ ಪರಿಷ್ಕರಿಸಿದ್ದು, ಎರಡು ಬಾರಿ ನ್ಯಾಕ್ ಅಥವಾ ಎನ್‌ಬಿಎ ಸಮಿತಿಯಿಂದ ಮೌಲ್ಯಮಾಪನದಲ್ಲಿ ಶಿಕ್ಷಣ ಸಂಸ್ಥೆ ಅಗ್ರ ಮಾನ್ಯತೆ ಪಡೆದಿರಬೇಕು. ಮತ್ತೆ ಮೂರನೇ ಬಾರಿಯೂ ಮಾನ್ಯತೆ ಕಾಯ್ದುಕೊಳ್ಳಬೇಕು (5 ವರ್ಷದ ಅವಧಿಗೆ). ರಾಷ್ಟ್ರೀಯ ಇನ್‌ಸ್ಟಿಟ್ಯೂಟ್ ರ‍್ಯಾಂಕಿಂಗ್ ಫ್ರೇಮ್‌ವರ್ಕ್‌ನಲ್ಲಿ (ಎನ್‌ಐಆರ್‌ಎಫ್) ಎರಡು ವರ್ಷಗಳವರೆಗೆ ಅಗ್ರ 100ರಲ್ಲಿ ಸ್ಥಾನ ಪಡೆದಿರಬೇಕು ಎಂಬ ನಿಯಮ ಜಾರಿಗೆ ಬಂತು. ಪ್ರಸ್ತುತ 2016ರಲ್ಲಿನ ನಿಯಮಗಳಲ್ಲಿ ಕೂಡ ತಿದ್ದುಪಡಿ ಮಾಡಲಾಗುತ್ತಿದೆ. ಈಗ ಕರಡು ಪ್ರತಿಯಲ್ಲಿ, ಶಿಕ್ಷಣ ಸಂಸ್ಥೆಯ ಒಟ್ಟು ಕೋರ್ಸ್‌ಗಳ ಪೈಕಿ ಶೇ.66 ಕೋರ್ಸ್‌ಗಳಿಗೆ ನ್ಯಾಕ್ ಮಾನ್ಯತೆ ಇದ್ದರೆ ಸಾಕು ( ಎರಡು ಬಾರಿ ಮೌಲ್ಯಮಾಪನದಲ್ಲಿ). ಮತ್ತು ಎನ್‌ಐಆರ್‌ಎಫ್‌ನ ಅಗ್ರ 200 ರ‍್ಯಾಂಕ್ ಪಡೆದಿದ್ದರೆ ಸಾಕು ಎಂಬ ಅಂಶವಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.